## ಶುಗರ್‌ಸಿಂಕ್

ಆ್ಯಂಡ್ರಾಯ್ಡ್‌ನ ಈ ಉಚಿತ ಆ್ಯಪ್ 5 ಗಿಗಾಬೈಟ್ಸ್ ಸಾಮರ್ಥ್ಯದ ಕ್ಲೌಡ್ ಆಧಾರಿತ ಬ್ಯಾಕಪ್ ಒದಗಿಸುತ್ತದೆ. ಫೋಟೊ  ಮತ್ತಿತರ ಫೈಲ್‌ಗಳಿಗೆ ಇದನ್ನು ಬಳಸಿಕೊಳ್ಳಬಹುದು. ಡ್ರಾಪ್ ಬಾಕ್ಸ್‌ಗಿಂತ ಹೆಚ್ಚು ಪ್ರಯೋಜನಕಾರಿ ಅಂಶಗಳಿವೆ. ಸಂಗೀತದ ಹರಿವು ಕೂಡಾ ಇದ್ದು, ಬಳಕೆದಾರರು ಫೋಲ್ಡರ್‌ಗಳನ್ನು ವಿಂಗಡಿಸಿಕೊಳ್ಳಬಹುದು. ಐಒಎಸ್‌ನ ಆ್ಯಪಲ್ ಫೋರ್‌ಕಾಸ್ಟ್ ಹಾಗೂ ಫೋಟೊ ಸ್ಟ್ರೀಮ್‌ನಂತೆ ಬಹೂಪಯೋಗಿಯಾದರೂ ಅವುಗಳಿಗಿಂತ ಹೆಚ್ಚು ಅಂಶಗಳನ್ನು ಹೊಂದಿದೆ. ಇದು ಪ್ರಮುಖ ಮೂರು ಟ್ಯಾಬ್‌ಗಳನ್ನು ಹೊಂದಿದ್ದು ಫೈಲ್, ಫೋಟೊ ಹಾಗೂ ಶೇರ್ಡ್ ಎಂದು ವಿಂಗಡಿಸಲಾಗಿದೆ. ಫೈಲ್‌ಗಳನ್ನು ಆರಾಮವಾಗಿ ಹುಡುಕಬಹುದು.







## ಕಿಡ್ಸ್ ಆ್ಯಪ್

ಆ್ಯಂಡ್ರಾಯ್ಡ್‌ನಲ್ಲಿರುವ ಅಮೆಝಾನ್ ಆ್ಯಪ್ ಸ್ಟೋರ್‌ನಲ್ಲಿ ಮಕ್ಕಳಿಗಾಗೇ ಹಲವು ಆ್ಯಪ್‌ಗಳು ಲಭ್ಯವಿದ್ದು, ಕಲಿಕೆಗೆ ಹಾಗೂ ಮನರಂಜನೆಗೆ ಉಪಯುಕ್ತ. ಬಾಲಿ ದ್ವೀಪದಲ್ಲಿ ವಿಹರಿಸಿ ಅಲ್ಲಿ ರಕ್ಕಸರಿಂದ ರಾಜ ಹಾಗೂ ರಾಣಿಯನ್ನು ರಕ್ಷಿಸುವ ಮಕ್ಕಳ ಕಥೆಯಂತೂ ಅದ್ಭುತ ಎಂದು ಬಣ್ಣಿಸಲಾಗಿದೆ. ಈ ಕಥೆಯಲ್ಲೇ ಗೇಮ್ ಕೂಡಾ ಇದ್ದು, ರಕ್ಕಸರನ್ನು ತಪ್ಪಿಸಿಕೊಳ್ಳಲು ಜಿಗಿದಾಗ ಲಡ್ಡು ಹಾಗೂ ಬಾಳೆಹಣ್ಣು ಸಂಪಾದಿಸಬಹುದು. ಗಣಿತ ಹಾಗೂ ಇಂಗ್ಲಿಷ್‌ನಲ್ಲಿ ಗೇಮ್‌ಗಳಿದ್ದು, ಕೌಶಲ ಬೆಳವಣಿಗೆಗೆ ಅನುಕೂಲ. ಇದರಲ್ಲಿ ಚೋಟಾ ಭೀಮ್ ಪಾತ್ರವಿದ್ದು, ಮಕ್ಕಳಿಗೆ ಸಾಕಷ್ಟು ಮನರಂಜನೆಯೂ ಸಿಗುತ್ತದೆ.




## ಟುಕ್ ಟುಕ್, ಬುಲ್‌ಬುಲ್

ಐಪ್ಯಾಡ್ ಹಾಗೂ ಐಫೋನ್‌ನ ಜನಪ್ರಿಯ ಮಕ್ಕಳ ಆ್ಯಪ್ ಬುಲ್‌ಬುಲ್ ಕಥೆಗಳಿಂದಾಗಿ ಪೋಷಕರಲ್ಲೂ ಕುತೂಹಲ ಹುಟ್ಟಿಸಿದೆ. ವಿಂಡೋಸ್ ಹಾಗೂ ಆ್ಯಂಡ್ರಾಯ್ಡ್ ಫೋನ್‌ನಲ್ಲೂ ಇದು ಲಭ್ಯವಿದ್ದು, ಎಲ್ಲಾ ಆ್ಯಪ್ ಸ್ಟೋರ್‌ಗಳಲ್ಲೂ ಬುಲ್‌ಬುಲ್‌ಸ್ಟುಡಿಯೊ.ಕಾಂ ಮೂಲಕ ಡೌನ್‌ಲೋಡ್ ಮಾಡಬಹುದು. ಇದರ 'ಪ್ರಿನ್ಸೆಸ್ ಆ್ಯಂಡ್ ಪೀ' 14 ದೇಶಗಳಲ್ಲಿ ಇಬುಕ್ ಆಗಿ ಜನಪ್ರಿಯಗೊಂಡಿದೆ. ಈಗ ಇದು ಮಕ್ಕಳಿಗಾಗೇ ಟುಕ್ ಟುಕ್ ಆ್ಯಪ್ ಬಿಡುಗಡೆ ಮಾಡಿದೆ. ಇದು ಮಕ್ಕಳಿಗೆ ಪ್ರವಾಸದ ಮೋಜನ್ನು ನೀಡುತ್ತದೆ. ಮುಂಬೈನ ಪ್ರಸಿದ್ಧ ಸ್ಥಳಗಳನ್ನು ಟುಕ್ ಟುಕ್ ಮತ್ತು ಟ್ಯಾಕ್ಸಿ ರಿಂಕು ವೀಕ್ಷಿಸುವ ಮೋಜನ್ನು ಮಕ್ಕಳೂ ಸವಿಯಬಹುದು. ಇದರಲ್ಲಿ ಗ್ರಾಫಿಕ್ಸ್, ಅನಿಮೇಶನ್, ಸಂಗೀತ ಮತ್ತು ನಿರೂಪಣೆಯನ್ನು ತುಂಬಿಸಲಾಗಿದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಯಲ್ಲಿ ಲಭ್ಯ.

## ಸಿಕ್ರೆಟ್‌ಕ್ಲಾಸೆಟ್

ಹೆಂಗಳೆಯರ ಬಹು ಪ್ರಿಯವಾದ ಆ್ಯಪ್ ಇದು. ತಮ್ಮ ಸಂಗ್ರಹದಲ್ಲಿ ಉಡುಪು, ಬ್ಯಾಗ್ ಎಂದು ರಾಶಿ ರಾಶಿ ಇಟ್ಟುಕೊಂಡಿರುವವರು ಮಾರಾಟ ಮಾಡಬಹುದು. ಹೊಸತು ಬೇಕೆನಿಸಿದರೆ ಖರೀದಿ ಕೂಡಾ ಮಾಡಬಹುದು. ಅಂತರರಾಷ್ಟ್ರೀಯ ಖ್ಯಾತಿಯ ಬ್ರ್ಯಾಂಡ್‌ನ ಉಡುಪು ಹಾಗೂ ಇತರ ವಸ್ತುಗಳು ಇಲ್ಲಿ ದೊರೆಯುತ್ತವೆ. ಬಳಸಿದ್ದು ಹಾಗೂ ಹೊಸತು ಎರಡೂ ಬಗೆಯವು ಸಿಗುತ್ತವೆ. ದೊಡ್ಡ ಮೊತ್ತದ ರಿಯಾಯ್ತಿ ಕೂಡಾ ಇರುತ್ತದೆ. ಯಾವುದೇ ಕಮಿಷನ್ ಇರುವುದಿಲ್ಲ. ಗ್ರಾಹಕ ಹಾಗೂ ಮಾರಾಟ ಮಾಡುವವರ ಮಧ್ಯೆ ಬೆಲೆ ಕುರಿತಂತೆ ಚೌಕಾಶಿ ಕೂಡಾ ಮಾಡಲು ಅವಕಾಶವಿದೆ.




■ ಎಸ್. ತುಂಬೆ